ಜೆ.ಆರ್. ಆದಿನಾರಾಯಣಮುನಿ

ಈಗಲೂ ಜಾತಿಯೆಂಬ ಕುದುರೆ ಹುಚ್ಚೆದ್ದು ಓಡುತ್ತಿದೆಯಲ್ಲ?



ಅದಕ್ಕೆ ರೇಸ್‌ಕೋರ್ಸ್‌ಗಳನ್ನು ನಿರ್ಮಿಸಲು ಮಠಗಳೂ ಮುಂದಾಗುತ್ತಿರುವುದೇ ಕಾರಣವಂತೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

‘ನಾವೇ ತೋಡಿದ ಹಳ್ಳಕ್ಕೆ ನಾವೇ ಬಿದ್ದಂತೆ’ ಎಂದರೇನು?

ಕಾಸು ಪಡೆದು ವೋಟು ಹಾಕಿ ಅಯೋಗ್ಯನಿಗೆ ಅಧಿಕಾರ ಕೊಡುವುದು.

ಬಿ.ಆರ್. ಉಷಾ, ಕೆನಡಾ

ಮನೆಯೇ ಮಂತ್ರಾಲಯ. ಮಠವೇ?

ಕೆಲವರಿಗಂತೂ ಭೋಜನಾಲಯ.

ಜೀವಿ, ಗೊಂಡೇದಹಳ್ಳಿ

ಬಿಸಿಲಲ್ಲಿ ಶ್ರಮಿಸುವ ನನ್ನ ಬಗ್ಗೆ ತೋರದ ಕನಿಕರವನ್ನು ಬಿಸಿಲಲ್ಲಿ ನಿಂತಿರುವ ಕಾರಿನ ಬಗ್ಗೆ ತೋರುವಳಲ್ಲ?



ನಿಮ್ಮದು ಇನ್ನು ಬದಲಾಗದ ಗ್ಯಾರಂಟಿ ಬಣ್ಣ. ಕಾರಿನದು ಹಾಗಲ್ಲವಲ್ಲ.

ಅನಸೂಯ ಟಿ. ಕೇದಿಗೆಮನೆ

ಹೊಸವರ್ಷದ ಭವಿಷ್ಯ ನನ್ನ ರಾಶಿಗೆ ಚೆನ್ನಾಗಿದೆಯಂತೆ. ನಿಮ್ಮ ರಾಶಿಗೆ ಹೇಗಿದೆಯಂತೆ?

ಕ್ಷಮಿಸಿ; ನಾನು ಹುಟ್ಟಿದ್ದು ಒಂಟಿಯಾಗಿಯೇ, ರಾಶಿ ಲೆಕ್ಕದಲ್ಲಲ್ಲ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಹಿಂದೆ ಯುವಕರು ಗಡ್ಡ ಬಿಟ್ಟರೆ ವ್ಯಸನಿಗಳು, ಖಿನ್ನರು ಎನ್ನುತ್ತಿದ್ದರು. ಈಗ ಬಹುತೇಕರು ಗಡ್ಡಧಾರಿಗಳಲ್ಲಾ?

‘ಛಿ! ಗಡ್ಡ ಚುಚ್ಚುತ್ತೆ ಹೋಗೀಪ್ಪಾ’ ಎನ್ನುವ ಹೆಣ್ಣುಗಳು ಕಡಿಮೆಯಾಗಿರುವುದೇ ಕಾರಣ.

ಕೆ.ಎನ್. ಶ್ವೇತ, ಕ್ಯಾತ್ಸಂದ್ರ

ಆಷಾಢಮಾಸ ಮತ್ತು ಶೂನ್ಯಮಾಸಗಳಲ್ಲಿ ಶುಭಕಾರ್ಯಗಳಿಗೇಕೆ ನಿರ್ಬಂಧ?

ಕೃಷಿಗೆ ಅತ್ಯವಶ್ಯವಾದ ದಿನಗಳನ್ನು ಖುಷಿಗೆ ಕಳೆಯದಿರಲೆಂದು.

ಬೂಕನಕೆರೆ ವಿಜೇಂದ್ರ, ಮೈಸೂರು

ಹೆಂಗಸರು ಒಗೆಯುವ ಬಟ್ಟೆಗಳಿಗಿಂತ ಗಂಡಸರು ಒಗೆಯುವ ಬಟ್ಟೆಗಳೇ ಹೆಚ್ಚು ಶುಭ್ರವಾಗಿರುತ್ತವಲ್ಲಾ?

ಪ್ರಾಕ್ಟೀಸ್ ಮೇಕ್ಸ್ ಮ್ಯಾನ್ ಪರ್ಫೆಕ್ಟ್!

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಸ್ನೇಹದ ಬೆಲೆ ತಿಳಿಯುವುದು ಯಾವಾಗ ಸರ್?

ಸಾಲಕ್ಕೆ ಶೂರಿಟಿ ನಿಲ್ಲಲು ಕೇಳಿದಾಗ.

ಎಂ.ಎಸ್, ಗುರುರಾಜ ಆಚಾರು, ಬಳ್ಳಾರಿ

ದೇಶದಲ್ಲಿ ಮಕ್ಕಳನ್ನು ಬೆಳೆಸಬೇಕೋ ಸಾಕಬೇಕೋ?

ಪ್ರಾಣಿಗಳಂತಾದರೆ ಸಾಕಿ; ಬೌದ್ಧಿಕವಾಗಾದರೆ ಬೆಳೆಸಿ.

ಬಾ.ರಂ. ಸುರೇಶ್, ಶಿವಮೊಗ್ಗ

ಈಗಿನ ರಾಜಕಾರಣಿಗಳು ರಾಮಾಯಣ, ಮಹಾಭಾರತದ ಆದರ್ಶಗಳನ್ನು ಅನುಸರಿಸುತ್ತಿದ್ದಾರಾ?

ಆದರ್ಶಗಳನ್ನು ಸರಿಸುತ್ತಿದ್ದಾರೆ. ಇವರಿಗೆ ಕೀಚಕ, ದುಶ್ಯಾಸನ, ಶಕುನಿಗಳೇ ಮಾದರಿ.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಸತ್ಯದ ಜೊತೆ, ಸತ್ತವರ ಜೊತೆ ಯಾರೂ ಹೆಚ್ಚು ಹೊತ್ತು ಇರಲ್ಲ. ಯಾಕೆ?

ಸೋಂಕಿನ ಭೀತಿ. ಸಾವಿನ ಸೋಂಕು ಗುಣವಾದೀತು; ಸತ್ಯದ ಸೋಂಕು ತಗುಲಿದರೆ ಬದುಕು ದುಸ್ತರ.

ಅರುಣ್ ಕುಲಕರ್ಣಿ, ನರೇಗಲ್ಲ

ಇಲ್ಲೊಬ್ಬ ತನ್ನ ವಾಹನದ ಮೇಲೆ ಅತ್ತೆ–ಮಾವನ ಆಶೀರ್ವಾದ ಎಂದು ಬರೆದಿದ್ದಾನಲ್ಲಾ?

ಅದು ಒಂದು ವಿಧವಾದ ‘ಹೈಪಾತಿಕೇಟೆಡ್ ಟು’ ಘೋಷಣೆ.

## ವಾರದ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

ಬಯಲ್ಸೀಮೆಯವ್ರು ಹಾವನ್ನ, ಮಲೆನಾಡವ್ರು ಮಂಗವನ್ನ ನಂಬಲ್ಲ. ಅಲ್ಲಿಂದಿಲ್ಲಿ ಬಂದು ನೆಲೆಸಿದ ನಾನೇನ್ಮಾಡ್ಲಿ?

ಆ ಎರಡೂ ಪ್ರಾಣಿಗಳಿಗಿರುವಂತಹ ಮನಸ್ಸಿನವರನ್ನು ನಂಬಬೇಡಿ.

ಕಾಳಿಹುಂಡಿ ಶಿವಕುಮಾರ್, ಮೈಸೂರು

ನೊಂದ ಮನಸ್ಸನ್ನು ಪಳಗಿಸುವುದು ಹೇಗೆ?

ಸಾಂತ್ವನದ ಟ್ಯೂಬಿನಿಂದ ವಾಸ್ತವದ ಮುಲಾಮನ್ನು ಹಚ್ಚುತ್ತಾ ಹಚ್ಚುತ್ತಾ...

ಹರಿತಸ, ಬೆಂಗಳೂರು

ಹ್ಯಾಂಗ್ ಆನ್ ಗೂ ಹ್ಯಾಂಗ್ ಓವರ್‌ಗೂ ವ್ಯತ್ಯಾಸವೇನು?

ಹ್ಯಾಂಗ್ ಆನ್ ಕುಟುಕು ಜೀವ; ಹ್ಯಾಂಗ್ ಓವರ್ ಗುಟುಕು ಜೀವ.

ಬಿ.ಸಿ. ರಾಮನ್, ಗೌರಿಬಿದನೂರು

ಇಲ್ಲೊಬ್ಬ ಪ್ರಸಿದ್ಧ ವೈದ್ಯರು ಎಂ.ಎಲ್.ಎ. ಆಗಲು ಸಿದ್ಧತೆ ನಡೆಸಿದ್ದಾರೆ. ಅವರಿಗೆ ನಿಮ್ಮ ಸಲಹೆ?



ಅದೇ ದುಡ್ಡಿನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತೆಗೆದರೆ ಜನ, ಧನ ನೀವು ಕುಂತಲ್ಲೇ ಬಂದಾವು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ದೇಶ ತಿರುಗಬೇಕು; ಕೋಶ ಓದಬೇಕು. ದಾನ ಧರ್ಮ ಮಾಡಬೇಕು. ನಂತರ?

ಇವಕ್ಕೆಲ್ಲ ಆಗಿರುವ ಸಾಲ ತೀರಿಸಬೇಕು!

ಸುಶೀಲಾ ಪಾಟೀಲ, ಸಂಕೇಶ್ವರ

ಎಲ್ಲರಿಗೂ ಎಲ್ಲದರಲ್ಲೂ ಕಡಿಮೆ ಇದ್ದರೂ ‘ದೇವರು ನಮಗೇನೂ ಕಡಿಮೆ ಮಾಡಿಲ್ಲ’ ಎನ್ನುತ್ತಾರಲ್ಲಾ?

ಭೇಷ್! ಕಡಿಮೆ ಆಗಿದ್ದಕ್ಕೆ ಕಾರಣ ದೇವರಲ್ಲ, ತಾವೇ ಎಂಬ ಪ್ರಾಮಾಣಿಕತೆ ಮೆಚ್ಚುವಂಥದ್ದೇ.

■ ರಾಮ್